ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ 01 ಇಎಪಿ 2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ:08/02/2018.

## ಜ್ಞಾಪನ

ವಿಷಯ: ಕೆ.ಐ.ಇ.ಟಿ. ಪಾಲಿಟೆಕ್ನಿಕ್(394), ಬೆಂಗಳೂರು ಈ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳ ಮರು ಮೌಲ್ಯಮಾಪನ ಶುಲ್ಕ, ಉತ್ತರ ಪತ್ರಿಕೆಯ ಫೋಟೋ ಪ್ರತಿ ಶುಲ್ಕ ಹಾಗು ಏಪ್ರಿಲ್/ಮೇ 2018 ರ ಪರೀಕ್ಷಾ ಶುಲ್ಕ ವನ್ನು ಎ.ಪಿ.ಎಸ್. ಪಾಲಿಟೆಕ್ನಿಕ್, ಬೆಂಗಳೂರು ಈ ಸಂಸ್ಥೆಯಲ್ಲಿ ಪಾವತಿಸುವ ಕುರಿತು.

*****

ಕೆ.ಐ.ಇ.ಟಿ. ಪಾಲಿಟೆಕ್ನಿಕ್(394), ಬೆಂಗಳೂರು ಈ ವಿದ್ಯಾ ಸಂಸ್ಥೆಯು ಮುಚ್ಚಲಾಗಿದ್ದು, ಯಾವುದೇ ಪಾಠ ಪ್ರವಚನಗಳು ನಡೆಯದಿರುವುದು ತಿಳಿದುಬಂದಿದೆ. ಕಾರಣ ಈ ವಿದ್ಯಾ ಸಂಸ್ಥೆಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಈ ಕೆಳಗೆ ನಮೂದಿಸಿರುವ ಕೋರ್ಸುಗಳಿಗೆ ಎ.ಪಿ.ಎಸ್.ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು ಈ ವಿದ್ಯಾ ಸಂಸ್ಥೆಯಲ್ಲಿ ಏಪ್ರಿಲ್/ಮೇ 2018 ಹಾಗು ಮುಂದಿನ ಪರೀಕ್ಷೆ ತೆಗೆದುಕೊಳ್ಳಲು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವಕಾಶ ಕಲ್ಪಿಸಲಾಗಿದೆ. ಕಾರಣ ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ವಿವರಗಳನ್ನು ಬಿಟಿಇ ಲಿಂಕ್ಸ್‌ನಲ್ಲಿ ಎ.ಪಿ.ಎಸ್. ಪಾಲಿಟೆಕ್ನಿಕ್ ಸಂಸ್ಥೆಯವರೆ ನಿರ್ವಹಿಸತಕ್ಕದ್ದು.

1. ಸಿವಿಲ್ ಇಂಜಿನಿಯರಿಂಗ್
2. ಕಂಪ್ಯೂಟರ್ ಸೈನ್ಸ್
3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್
4. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್
5. ಇನ್‌ಫರ್‌ಮೇಷನ್ ಸೈನ್ಸ್
6. ಮೆಕ್ಯಾನಿಕಲ್ ಇಂಜಿನಿಯರಿಂಗ್

ಇದಲ್ಲದೇ ನವೆಂಬರ್/ಡಿಸೆಂಬರ್ 2017 ರ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಮರು ಮೌಲ್ಯಮಾಪನ ಹಾಗು ಉತ್ತರ ಪತ್ರಿಕೆಯ ಫೋಟೋ ಪ್ರತಿಗೆ ಅರ್ಜಿ ಸಲ್ಲಿಸಿದಲ್ಲಿ, ಅಂತಹ ವಿದ್ಯಾರ್ಥಿಗಳ ವಿವರಗಳನ್ನು ದಿನಾಂಕ:09/02/2018 ರೊಳಗೆ ಬಿಟಿಇ ಲಿಂಕ್ಸ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ಪ್ರಿನ್ಸಿಪಾಲರು, ಎ.ಪಿ.ಎಸ್.ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು – ಇವರ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ.

ಪ್ರತಿ:

1) ಪ್ರಿನ್ಸಿಪಾಲರು, ಕೆ.ಐ.ಇ.ಟಿ. ಪಾಲಿಟೆಕ್ನಿಕ್, ಬೆಂಗಳೂರು – ಇವರ ಮಾಹಿತಿಗಾಗಿ.
2) ಸಿಸ್ಟಂ ಅನಾಲಿಸ್ಟ್, ಕಂಪ್ಯೂಟರ್ ವಿಭಾಗ, ತಾ.ಶಿ.ಪ.ಮಂ.ಬೆಂಗಳೂರು.
3) ಇ-ಆಡಳಿತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4) ಕಾರ್ಯದರ್ಶಿಯವರ ಆಪ್ತ ಶಾಖೆ.

eap sv